C.R.P.67

Form No.4 (Civil)
Deposition Sheets
(R.P.No.57)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

ಎಸ್.ಸಿ. ಸಂಖ್ಯೆಃ113/2022

ಪ್ರಾಸಾ. 02 ಚಾಸಾ. 02

| | |
|---|---|
| ಸಾಕ್ಷಿದಾರರ ಹೆಸರು | ಮಂಗಳಮ್ಮ |
| ಗಂಡನ ಹೆಸರು | ಶ್ರೀಕಂಠಸ್ವಾಮಿ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೇವಪಟ್ಟಣಗ್ರಾಮ |

ಸಾಕ್ಷಿಯನ್ನು ದಿನಾಂಕಃ20.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಯಜಮಾನರು, ಚಾಸಾ-3 ನನ್ನ ಮಗ, ಚಾಸಾ-4 ರಿಂದ 12 ಗೊತ್ತು. ಸದರಿಯವರು ನಮ್ಮ ಊರಿನವರು ಹಾಗೂ ಸಂಬಂಧಿಕರು. ಮೃತೆ ಸಂಧ್ಯಾ ನನ್ನ ಮಗಳು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. 1 ನೇ ಆರೋಪಿ ನನ್ನ ಅಳಿಯ, 2 ನೇ ಆರೋಪಿ 1 ನೇ ಆರೋಪಿಯ ತಂದೆ.

2. ನನ್ನ ಮಗಳು ಸುಮಾರು ಸುಮಾರು 4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾಳೆ. ಆಕೆ ತೀರಿಕೊಳ್ಳುವ ಒಂದು ವರ್ಷದ ಹಿಂದೆ ಆಕೆಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಮಾಡಿದ್ದೆವು. ನಮ್ಮ ಮನೆಯ ಪಕ್ಕದಲ್ಲಿ ಆರೋಪಿಯ ನೆಂಟರಿದ್ದು, ಅವರ ಮನೆಗೆ ಆರೋಪಿಯ ಚಿಕ್ಕಪ್ಪನಾದ ರವಿ ಎಂಬುವವರು ಬಂದು ನಮ್ಮ ಮಗಳನ್ನು ಆರೋಪಿಯೊಂದಿಗೆ ಮದುವೆ ಮಾಡಿಕೊಡಿ ಎಂದು ಕೇಳಿದರು. ಆಗ ನಾವು ಈಗಲೇ ಮದುವೆ ಮಾಡುವುದಿಲ್ಲ, ಆಕೆ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ ಎಂದು ತಿಳಿಸಿದೆವು. ಅದಾದ ನಂತರ

ಪುನಃ ನಮ್ಮ ಮಗಳನ್ನು ಮದುವೆ ಮಾಡಿಕೊಡಿ ಎಂದು ಆರೋಪಿಯ ಚಿಕ್ಕಪ್ಪ ಒತ್ತಾಯ ಮಾಡಿದ್ದರಿಂದ ನಾವು ಏನು ಕೊಡಲು ಆಗುವುದಿಲ್ಲ ಎಂದು ಹೇಳಿದೆವು. ಆಗ ನೀವು ಏನು ಕೊಡುವುದು ಬೇಡ ಮದುವೆ ಮಾಡಿಕೊಡಿ ಎಂದು ಹೇಳಿದ್ದರಿಂದ ನನ್ನ ಮಗಳ ಮದುವೆಯನ್ನು ಮಾಡಿದೆವು.

3. ಆರೋಪಿ ಮದುವೆಯ ಪೂರ್ವದಲ್ಲಿ ನಮ್ಮ ಮನೆಗೆ ಬಂದು ಮದುವೆ ಮಾಡಿಕೊಡಿ ಎಂದು ಹೇಳಿದರು. ಆ ಸಂದರ್ಭದಲ್ಲಿ ಯಾವುದೇ ಮಾತುಕತೆ ಆಗಿರುವುದಿಲ್ಲ. ಮದುವೆ ಮಾಡಿದ ನಂತರ ನನ್ನ ಮಗಳನ್ನು ಆರೋಪಿಯ ಮನೆಗೆ ಕಳುವುಸಿದೆವು. ನಂತರ 1 ನೇ ಆರೋಪಿ ನನ್ನ ಮಗಳಿಗೆ ದುಡ್ಡು ಬೇಕು ಎಂದು ಕೇಳುತ್ತಿದ್ದರು. ಸದರಿ ವಿಚಾರ ನನ್ನ ಮಗಳು ನನಗೆ ಹೇಳಿದ್ದಳು.

4. ನಂತರ 60 ಅಥವಾ 70 ಸಾವಿರ ರೂಗಳನ್ನು ನನ್ನ ಅಣ್ಣನಾದ ಸೋಮಣ್ಣ ಆರೋಪಿಯ ಮನೆಗೆ ಹೋಗಿ ಅವರ ಕೈಗೆ ಕೊಟ್ಟನು. ಆ ರೀತಿ ಹಣ ಕೊಟ್ಟರೂ ಸಹ ಇನ್ನೂ ಹಣ ಬೇಕು ಎಂದು ಕೇಳುತ್ತಿದ್ದರು. ನಂತರ ನನ್ನ ಮಾಂಗಲ್ಯ ಸರವನ್ನು ಆರೋಪಿಗೆ ನೀಡಿದೆ. ಆರೋಪಿ ಅದನ್ನು ಅಡವಿಟ್ಟು ನಂತರ ಬಿಡಿಸಿಕೊಟ್ಟರು.

5. ಒಂದು ಬಾರಿ ಜಗಳವಾಡಿ ನನ್ನ ಮಗಳನ್ನು ನಾನು ನಮ್ಮ ಮನೆಗೆ ಕರೆದುಕೊಂಡು ಬಂದೆ. ಆ ರೀತಿ ಕರೆದುಕೊಂಡು ಬಂದಾಗ ಮಾರನೇ ದಿನ ಆರೋಪಿ ಬಂದು ಕರೆದುಕೊಂಡು ಹೋಗುತ್ತಿದ್ದರು. ಒಂದು ವರ್ಷ ಕಾಲ ಸಹ ಹಾಗೆ ಮಾಡುತ್ತಿದ್ದರು. ನಮ್ಮ ಮನೆಯಲ್ಲಿ ಒಂದು ದಿನವೂ ಇರಲು ಬಿಡುತ್ತಿರಲಿಲ್ಲ. ಒಂದು ಬಾರಿ ಗೃಹಪ್ರವೇಶವಿದೆ ಎಂದು ನಮ್ಮ ಮನೆಗೆ ಕಳುಹಿಸಿಕೊಡಿ ಎಂದು ಕೇಳಿದೆವು. ನಂತರ ನಾವು ಆರೋಪಿಯೊಂದಿಗೆ ಜಗಳಮಾಡಿ ನಮ್ಮ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆವು. ನನ್ನ ಮಗಳು ನಮ್ಮ ಊರಿನಿಂದ ಕೆ.ಎಂ. ದೊಡ್ಡಿಗೆ ಕಂಪ್ಯೂಟರ್ ಕ್ಲಾಸಿಗೆ ಹೋಗುತ್ತಿದ್ದಳು. ಆ ರೀತಿ ನಾವು ನಮ್ಮ ಮನೆಗೆ ಕರೆದುಕೊಂಡು ಬಂದ ಎರಡು ದಿನಗಳ ನಂತರ 2 ನೇ ಆರೋಪಿ ಕರೆ ಮಾಡಿ ನಮ್ಮ ಸೊಸೆಯನ್ನು ಕಳುಹಿಸಿಕೊಡಿ ಎಂದು ಕೇಳಿದರು. ನಾವು ಕಳುಹಿಸಲು ಆಗುವುದಿಲ್ಲ ಎಂದು ಹೇಳಿದಾಗ ಫೋನ್ ಕಟ್ ಮಾಡಿದರು.

6. ಭಾನುವಾರ ರಜಾ ಇದ್ದು, ಸೋಮವಾರ ನನ್ನ ಮಗಳು ಕಂಪ್ಯೂಟರ್ ಕ್ಲಾಸಿಗೆ ಹೋದಳು. ಕಂಪ್ಯೂಟರ್ ಕ್ಲಾಸ್ ಮುಗಿಸಿ ವಾಪಸ್ಸು ಮನೆಗೆ ಬಂದು 1ನೇ ಆರೋಪಿ ಕೆ.ಎಂ.ದೊಡ್ಡಿಗೆ ಬಂದು ನನ್ನ ಮಗಳನ್ನು ಕರೆದುಕೊಂಡು ಸ್ವಲ್ಪ ದೂರ ಹೋಗಿ ಗಾಡಿ ಕೆಟ್ಟು ಹೋಯಿತು ಎಂದು ಹೇಳಿ ವಾಪಸ್ಸು ನೀನು ಕ್ಲಾಸಿಗೆ ಹೋಗು ಎಂದು ತಿಳಿಸಿ, 1ನೇ ಆರೋಪಿ ವಾಪಸ್ಸು ಹೋದ ಎಂದು ನನ್ನ ಮಗಳು ನನಗೆ ತಿಳಿಸಿದಳು.

7. ಮಂಗಳವಾರ ನನ್ನ ಮಗಳು ಕಂಪ್ಯೂಟರ್ ಕ್ಲಾಸಿಗೆ ನಮ್ಮ ಮನೆಯಿಂದ ಬೆಳಿಗ್ಗೆ 10.00 ಗಂಟೆ ಬಸ್ಸಿಗೆ ಹೋದಳು. ಆದರೆ ಪ್ರತೀ ದಿನ ಹೋಗಿ ಮಧ್ಯಾಹ್ನ 2.00 ಗಂಟೆಗೆ ಬರುವ ಸಮಯಕ್ಕೆ ಆಕೆ ವಾಪಸ್ಸು ಮನೆಗೆ ಬಂದಿಲ್ಲ. ಆಗ ನಾವು ನಮ್ಮ ಪಕ್ಕದ ಮನೆಯವರ ಮೊಬೈಲಿನಿಂದ ನನ್ನ ಮಗಳಿಗೆ ಕರೆ ಮಾಡಿಸಿದೆವು, ಆದರೆ ಆಕೆಯ ಮೊಬೈಲ್ ಸ್ವಿಚ್ ಆಫ್ ಬರುತ್ತಿತ್ತು. ನಮ್ಮ ಊರಿಗೆ 4.30 ಗಂಟೆಗೆ ಮಳವಳ್ಳಿಯಿಂದ ಬಸ್ ಬರುತ್ತದೆ, ಆಗ ಸದರಿ ಬಸ್ಸಿನಲ್ಲಿ ನಮ್ಮ ಮಗಳು ಬರಬಹುದು ಎಂದು ಕಾದು ನೋಡಿದೆವು. ಆದರೆ ಸದರಿ ಬಸ್ಸಿನಲ್ಲಿಯೂ ಸಹ ನಮ್ಮ ಮಗಳು ಮನೆಗೆ ವಾಪಸ್ಸು ಬಂದಿಲ್ಲ.

8. ನಂತರ ನನ್ನ ಯಜಮಾನರು/ ಚಾಸಾ-1 ರವರು 2ನೇ ಆರೋಪಿಗೆ ಕರೆ ಮಾಡಿ ನಮ್ಮ ಮಗಳು ನಿಮ್ಮ ಮನೆಗೆ ಬಂದಿದ್ದಾಳಾ ಎಂದು ವಿಚಾರಿಸಿದಾಗ 2ನೇ ಆರೋಪಿ ನಮ್ಮ ಮಗಳು ಬಂದಿಲ್ಲ ಎಂದು ಹೇಳಿದರು. ನಂತರ ನನ್ನ ಯಜಮಾನರು, ಪಕ್ಕದ ಮನೆಯವರು ಹಾಗೂ 3-4 ಜನರು ಸೇರಿ ಕಾರು ಮಾಡಿಕೊಂಡು ಆರೋಪಿಯ ಮನೆಯ ಬಳಿ ಹೋದರು. ಅಲ್ಲಿ ಹೋಗಿ ಕೇಳಿದಾಗ ಆರೋಪಿತರು ನಮ್ಮ ಮಗಳು ಬಂದಿಲ್ಲ ಎಂದು ತಿಳಿಸಿದ ನಂತರ ನನ್ನ ಯಜಮಾನರು ವಾಪಸ್ಸು ಊರಿಗೆ ಬಂದು ಸದರಿ ವಿಚಾರ ನನಗೆ ಹೇಳಿ ನಂತರ ಆರೋಪಿತರು ನಮ್ಮ ಮಗಳು ಬಂದಿಲ್ಲ ಎಂದು ಹೇಳುತ್ತಿದ್ದಾರೆ, ಅವರೇ ಏನೋ ಮಾಡಿರಬಹುದು ಎಂದು ಅನಿಸಿತು. ಆದ್ದರಿಂದ ಬೆಳಗಿನ ಜಾವ ನಾವು ನಮ್ಮ ಮಗಳು ಬರದೇ ಇದ್ದುದರಿಂದ ಪೊಲೀಸರಿಗೆ ದೂರು ಕೊಡುವ ಎಂದು ಆರೋಪಿತರಿಗೆ ಹೇಳಿದೆವು. ಆಗ ಆರೋಪಿತರು ದೂರು ಕೊಡಿ ನಾವೂ ಬರುತ್ತೇವೆ ಎಂದು ಹೇಳಿದರು.

9. ನಾವು ಇನ್ನೂ ದೂರು ನೀಡಿರಲಿಲ್ಲ, ಆಗಲೇ ಆರೋಪಿಯ ಕಡೆಯವರು ನನ್ನ ಯಜಮಾನರಿಗೆ ಕರೆ ಮಾಡಿ 1ನೇ ಆರೋಪಿ ವಿಷ ಕುಡಿದಿದ್ದಾನೆ ಎಂದು ತಿಳಿಸಿದರು. ನಂತರ ನಾವೇ ಪೊಲೀಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ನನ್ನ ಯಜಮಾನರು ಹಾಗೂ ನನ್ನ

ಮೈದುನ ಸೇರಿ ದೂರು ನೀಡಿದರು. ನಾವು ದೂರು ನೀಡಿದ ನಂತರವೂ ಸಹ ನಮ್ಮ ಮಗಳು ಬಂದಿಲ್ಲ.

**10.** ನಂತರ ಯಾರೋ ನನ್ನ ಮಗನಿಗೆ ಕರೆ ಮಾಡಿ ನಮ್ಮ ಮಗಳ ಶವ ಕುಂತೂರು ಬೆಟ್ಟದ ಬಳಿ ಕಾಲುವೆಯಲ್ಲಿ ಸಿಕ್ಕಿದೆ ಎಂದು ತಿಳಿಸಿದ ಮೇರೆಗೆ ನಮ್ಮ ಊರಿನವರು ಹಾಗೂ ನನ್ನ ಯಜಮಾನರು ಮತ್ತು ನನ್ನ ಮಗ ಸೇರಿ ಹೋಗಿ ನೋಡಿದರು, ಆದರೆ ನಾನು ಹೋಗಲಿಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ಇದ್ದರು ಎಂದು ತಿಳಿಸಿದರು. ನಂತರ ನಾನು ನನ್ನ ಮಗಳ ಶವವನ್ನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ.

**11.** ಪೊಲೀಸರು ಆರೋಪಿ ನಮ್ಮ ಮಗಳನ್ನು ಕರೆದುಕೊಂಡು ಹೋಗಿ ಸಾಯಿಸಿ ಕಾಲುವೆಗೆ ಹಾಕಿದ್ದಾನೆ ಎಂದು ಹೇಳಿದ್ದರಿಂದ ವಿಚಾರ ಗೊತ್ತಾಯಿತು. ಪೊಲೀಸರು ನನ್ನ ವಿಚಾರಣೆ ಮಾಡಿಲ್ಲ, ನಾನು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಪೊಲೀಸ್ ಠಾಣೆಗೂ ಸಹ ಎಂದೂ ಹೋಗಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಏನನ್ನು ತೋರಿಸಿರುವುದಿಲ್ಲ.

**12.** ಸಾಕ್ಷಿಗೆ ಈಗ ತೋರಿಸಿದಂತಹ ಫೋಟೋದಲ್ಲಿರುವ ನೆಕ್ಲೆಸ್ ನನ್ನ ಮಗಳಿಗೆ ಮದುವೆ ಸಂದರ್ಭದಲ್ಲಿ ಕೊಟ್ಟಂತಹ ನೆಕ್ಲೆಸ್ ಆಗಿದ್ದು, ನನ್ನ ಯಜಮಾನರು ಸದರಿ ನೆಕ್ಲೆಸನ್ನು ಆರೋಪಿ ನೀಡಿದರು ಎಂದು ಬಿಡಿಸಿಕೊಂಡು ಮನೆಗೆ ತಂದಿದ್ದರು. ಸದರಿ ನೆಕ್ಲೆಸ್ ಈಗ ನಮ್ಮ ಬಳಿ ಇರುತ್ತದೆ. ಸಾಕ್ಷಿಗೆ ತೋರಿಸಿದಂತಹ ಸದರಿ ಫೋಟೋವನ್ನು ನಿಪಿ-8 ಎಂದು ಗುರುತಿಸಲಾಯಿತು. ಮದುವೆಯಾದ ನಂತರ 1ನೇ ಆರೋಪಿಗೆ ನಾವು ಉಂಗುರವನ್ನು ನೀಡಿದ್ದೆವು. ನನ್ನ ಮಗಳು ಸತ್ತ ನಂತರ ಸದರಿ ಉಂಗುರವನ್ನೂ ಸಹ ನನ್ನ ಯಜಮಾನರು ನ್ಯಾಯಾಲಯದಿಂದ ಬಿಡಿಸಿಕೊಂಡು ಬಂದಿದ್ದರು, ನಾನೂ ಸಹ ಉಂಗುರ ಮತ್ತು ನೆಕ್ಲೆಸನ್ನು ಮಳವಳ್ಳಿ ನ್ಯಾಯಾಲಯದಲ್ಲಿ ನೋಡಿದ್ದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ಮದುವೆ ಮಾತುಕತೆಯ ಸಂದರ್ಭದಲ್ಲಿ ಆರೋಪಿ ಒಂದೂವರೆ ಲಕ್ಷ ವರದಕ್ಷಿಣೆ ಕೇಳಿದಾಗ ನಾವು ನಮ್ಮ ಬಳಿ ಅಷ್ಟು ಹಣ ಇಲ್ಲ 80 ಸಾವಿರ ಕೊಡತ್ತೇವೆ ಎಂದು ಹೇಳಿ ನನ್ನ ಯಜಮಾನರು ಮತ್ತು ಚಾಸಾ-6 ರಿಂದ ಚಾಸಾ-8 ರವರ ಸಮಕ್ಷಮ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಎಂಗೇಜ್‌ಮೆಂಟ್ ಕಾಲದಲ್ಲಿ 6 ಗ್ರಾಂ ತೂಕದ ಉಂಗುರ ಕೊಟ್ಟಿದ್ದೆವು ಎಂದರೆ ಸರಿ. ಮದುವೆ ಇನ್ನು ವಾರ ಇದೆ ಎನ್ನುವಾಗ ಚಾಸಾ-1 ಮತ್ತು ಚಾಸಾ-6 ರವರು ಹೋಗಿ 80 ಸಾವಿರ ರೂಗಳನ್ನು 1 ನೇ ಆರೋಪಿಯ ಸಮಕ್ಷಮದಲ್ಲಿ 2 ನೇ ಆರೋಪಿಯ ಕೈಗೆ ನೀಡಿದ್ದರು ಎಂದರೆ ಸರಿ.

2. ನಂತರ ಪದೇ ಪದೇ ಹೆಚ್ಚಿನ ವರದಕ್ಷಿಣೆ ಹಣ ಕೇಳಿದ್ದರಿಂದ ಒಂದು ಬಾರಿ ಚಾಸಾ-3 ರವರ ಮೊಬೈಲಿನಿಂದ 1 ನೇ ಆರೋಪಿಯ ಸ್ನೇಹಿತ ಶಿವರಾಜು ರವರ ಮೊಬೈಲಿಗೆ 25 ಸಾವಿರ ರೂಗಳನ್ನು ಕಳುಹಿಸಿದ್ದೆವು ಎಂದರೆ ಸರಿ. ನಮ್ಮ ಅಳಿಯ ಕೇಳುತ್ತಿದ್ದುದರಿಂದ ಒಂದು ಬಾರಿ 20 ಸಾವಿರ ಮತ್ತು 30 ಸಾವಿರ ರೂಗಳನ್ನು ನಮ್ಮ ಮಗಳ ಕೈಗೆ ಕೊಟ್ಟು ಕಳುಹಿಸಿದ್ದೆವು ಎಂದರೆ ಸರಿ. ನನ್ನ ಮಗಳು ನಾವು ಕೊಟ್ಟಂತಹ ನೆಕ್ಲೆಸ್ ಹಾಗೂ ಉಂಗುರವನ್ನು ಆರೋಪಿ ಬೇರೆಯವರಿಗೆ ಕೊಟ್ಟಿರುವ ವಿಚಾರವನ್ನು ನಮಗೆ ತಿಳಿಸಿದ್ದಳು ಎಂದರೆ ಸರಿ. ನನ್ನ ಮಗಳು ಸತ್ತು ಹೋಗಿರುವ ವಿಚಾರ ತಿಳಿದು ನಾನೂ ಸಹ ಕಾಲುವೆಯ ಬಳಿ ಹೋಗಿ ಶವವನ್ನು ನೋಡಿದೆ ಎಂದರೆ ಸರಿಯಲ್ಲ.

3. ನಾನು ಪೊಲೀಸರ ಮುಂದೆ ನನ್ನ ಅಳಿಯ ರವರ ವಿಚಾರ ಮಾಡಿದಾಗ ---------------------------- ವಿಚಾರ ಗೊತ್ತಾಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ಕೆಲವು ಭಾಗವನ್ನು ಸಾಕ್ಷಿ ಒಪ್ಪಿದ್ದು, ಕೆಲವು ಭಾಗಗಳನ್ನು ಅಲ್ಲಗಳೆದಿರುತ್ತಾರೆ. ಆದುದರಿಂದ ಸದರಿ ಭಾಗವನ್ನು ನಿಪಿ-10, ಎಂದು ಅಲ್ಲಗಳೆದ ಭಾಗಗಳನ್ನು ನಿಪಿ-10(ಎ), (ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.

4. ದಿನಾಂಕಃ04.12.2021 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ನನ್ನ ಮಗಳಿಗೆ ಸಂಬಂಧಪಟ್ಟ ನೆಕ್ಲೆಸ್ ಮತ್ತು ಒಂದು ಉಂಗುರವನ್ನು ನೋಡಿ ಗುರುತಿಸಿ, ಈಗ ಓದಿ

ಹೇಳಿದ ಪ್ರಕಾರ ಮುಂದುವರೆದ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲುঃ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ

ನನ್ನ ಮದುವೆಯಾದ ನಂತರ ನಾನು ಮತ್ತು ನನ್ನ ಯಜಮಾನರು ಬೆಂಗಳೂರಿನಲ್ಲಿ ವಾಸಮಾಡಿಕೊಂಡಿದ್ದೆವು ಎಂದರೆ ಸರಿ. ಆ ರೀತಿ ಸುಮಾರು 10 ವರ್ಷಗಳ ಕಾಲ ಬೆಂಗಳೂರಿನಲ್ಲಿದ್ದೆವು. ನಮ್ಮ ಇಬ್ಬರು ಮಕ್ಕಳ ವಿದ್ಯಾಭ್ಯಾಸ ಬೆಂಗಳೂರಿನಲ್ಲೇ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ಮಗಳ ವಿದ್ಯಾಭ್ಯಾಸ ಮಾತ್ರ ಬೆಂಗಳೂರಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾವು ಸುಶೀಲಮ್ಮ ಮತ್ತು ಗುಬ್ಬಿ ತೋಟಪ್ಪ ರವರ ಮನೆಯಲ್ಲಿ ಇದ್ದೆವು. ಗುಬ್ಬಿ ತೋಟಪ್ಪ ತೀರಿಕೊಂಡಿದ್ದರು, ಸುಶೀಲಮ್ಮ ಇದ್ದರು. ಸುಶೀಲಮ್ಮ ರವರಿಗೆ ನನ್ನ ಮಗಳನ್ನು ಕಂಡರೆ ಬಹಳ ಆಸೆ ಇತ್ತು ಎಂದರೆ ಸರಿ. ನನ್ನ ಮಗಳಿಗೆ ಆದ್ದರಿಂದ ಬೆಂಗುಳೂರಿನಲ್ಲಿರಬೇಕು ಎಂಬ ಆಸೇ ಇತ್ತು ಎಂದರೆ ಸರಿಯಲ್ಲ.

2. ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ನನ್ನ ಅಣ್ಣ ಪುಟ್ಟಪ್ಪ/ ಚಾಸಾ-23 ಬಂದಿರುತ್ತಾರೆ. ಮೊದಲಿನಿಂದಲೂ ಸಹ ಪೊಲೀಸ್ ವ್ಯವಹಾರವನ್ನೆಲ್ಲಾ ಪುಟ್ಟಪ್ಪ/ ಚಾಸಾ-23 ರವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಈ ದಿನವೂ ಸಹ ಅಣ್ಣ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುವ ಬಗ್ಗೆ ಚರ್ಚೆ ಮಾಡಿದ್ದರು ಎಂದರೆ ಸಾಕ್ಷಿ ಅವರು ಕೇಳಿದಷ್ಟು ಉತ್ತರ ಕೊಡು ಎಂದು ಹೇಳಿದರು ಎಂದು ನುಡಿಯುತ್ತಾರೆ. ನನ್ನ ಗಂಡ ನ್ಯಾಯಾಲಯದಲ್ಲಿ ಏನು ಸಾಕ್ಷ್ಯ ನುಡಿದಿದ್ದಾರೆ ಎನ್ನುವ ಬಗ್ಗೆ ನನ್ನೊಂದಿಗೆ ಚರ್ಚೆ ಮಾಡಿದ್ದರು. ಚಾಸಾ-23 ರವರೂ ಸಹ ನನ್ನ ಯಜಮಾನರು ನ್ಯಾಯಾಲಯದಲ್ಲಿ ಏನು ಸಾಕ್ಷ್ಯ ನೀಡಿದ್ದಾರೆ ಎನ್ನುವ ಬಗ್ಗೆ ಹೇಳಿದ್ದಾರೆ ಎಂದರೆ ಸರಿ.

3. ಕಿರುಗಾವಲಿನಲ್ಲಿ ನನ್ನ ಅತ್ತೆಯ ಮಗಳಾದ ಮಂಗಳಮ್ಮ ಎಂಬುವವರು ಇದ್ದಾರೆ. ನಾವು ಅವರ ಮನೆಗೆ ಭೇಟಿ ಮಾಡಿರುವುದಿಲ್ಲ. 1 ನೇ ಆರೋಪಿಯ ಮದುವೆಯ ಪೂರ್ವದಲ್ಲಿ ನನ್ನ ಮಗಳಿಗೆ ಬೇರೆಯವರೊಂದಿಗೆ ನಿಶ್ಚಿತಾರ್ಥ ಆಗಿತ್ತು ಎಂದರೆ ಸರಿ. ಆ ಹುಡುಗನ ಹೆಸರು ಶ್ರೀಕಂಠಸ್ವಾಮಿ ಎಂದರೆ ಸರಿ. ಆತನಿಗೆ ತಾಯಿ ಇರಲಿಲ್ಲ, ತಂದೆ ಮಾತ್ರ ಇದ್ದರು ಎಂದರೆ ಸರಿ. ಶ್ರೀಕಂಠಸ್ವಾಮಿಯ ತಂದೆಯ ಹೆಸರು ಬಸವರಾಜು ಇರಬಹುದು, ಗೊತ್ತಿಲ್ಲ.

ಶ್ರೀಕಂಠಸ್ವಾಮಿರವರಿಗೆ ಒಬ್ಬ ಅಣ್ಣ ಸಿದ್ದಲಿಂಗಸ್ವಾಮಿ ಎಂಬುವವರು ಇದ್ದರು ಎಂದರೆ ಸಾಕ್ಷಿ ಇದ್ದರಂತೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

**4.** ನಿಶ್ಚಿತಾರ್ಥದ ಪೂರ್ವದಲ್ಲಿ ನಾವು ಶ್ರೀಕಂಠಸ್ವಾಮಿ ರವರ ಮನೆಗೆ ಹೋಗಿ ಬಂದಿದ್ದೆವು. ಅವರೂ ಸಹ ನಮ್ಮ ಮನೆಗೆ ಬಂದು ನೋಡಿಕೊಂಡು ಹೋಗಿದ್ದರು. ಸದರಿ ನಿಶ್ಚಿತಾರ್ಥ ಆಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ನಾವು ಹುಡುಗನಿಗೆ ಒಂದು ಉಂಗುರ ಕೊಟ್ಟಿದ್ದೆವು. ಆದೇ ರೀತಿ ಅವರೂ ಸಹ ನನ್ನ ಮಗಳಿಗೆ ಉಂಗುರ ನೀಡಿದ್ದರು ಎಂದರೆ ಸರಿ. ನಿಶ್ಚಿತಾರ್ಥದ ಸಮಯದಲ್ಲಿ ನಮ್ಮ ನೆಂಟರು ಸುಮಾರು ಜನ ಸೇರಿದ್ದರು ಎಂದರೆ ಸರಿ. ಸದರಿ ಶ್ರೀಕಂಠಸ್ವಾಮಿ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದನು ಎಂದರೆ ಸರಿ. ಸಾಕ್ಷಿ ತಮ್ಮ ಸ್ವಇಚ್ಚೆಯಿಂದ ಆತ ಸುಳ್ಳು ಹೇಳಿದ್ದಾನೆ ಎಂದು ನುಡಿಯುತ್ತಾರೆ.

**5.** ಶ್ರೀಕಂಠಸ್ವಾಮಿ ಬೆಂಗಳೂರಿನ ಸ್ವಪ್ನ ಬುಕ್ ಹೌಸ್ ನಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಎಂದು ನಮಗೆ ತಿಳಿಸಿದ್ದ ಎಂದರೆ ಸಾಕ್ಷಿ ನನಗೆ ತಿಳಿಸಿಲ್ಲ, ನಮ್ಮ ಮನೆಯವರಿಗೆ ಹೇಳಿರಬಹುದು ಎಂದು ಹೇಳುತ್ತಾರೆ. ಶ್ರೀಕಂಠಸ್ವಾಮಿ ರವರ ಜೊತೆ ಮದುವೆಗೆ ನನ್ನ ಮಗಳು ಒಪ್ಪಿಕೊಡಿದ್ದಳು ಎಂದರೆ ಸಾಕ್ಷಿ ಒಪ್ಪಿರಲಿಲ್ಲ, ನಂತರ ಬೇಡ ಎಂದು ಬಿಟ್ಟಳು ಎಂದು ನುಡಿಯುತ್ತಾರೆ. ನಿಶ್ಚಿತಾರ್ಥ ಮಾಡುವ ಪೂರ್ವದಲ್ಲಿಯೂ ಸಹ ನನ್ನ ಮಗಳು ಮದುವೆಗೆ ಒಪ್ಪಿರಲಿಲ್ಲ, ಆದರೆ ಹುಡುಗನ ಮನೆಯವರು ನಿಶ್ಚಿತಾರ್ಥಕ್ಕೆ ಸೀರೆಯನ್ನು ತಂದುಬಿಟ್ಟಿದ್ದರು. ಸೀರೆ ತಂದು ಬಿಟ್ಟರು ಎಂದು ನಿಶ್ಚಿತಾರ್ಥ ಮಾಡಿಬಿಟ್ಟರಾ ಎಂಬ ಸೂಚನೆಗೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**6.** ನಿಶ್ಚಿತಾರ್ಥ ಆದಾಗ ಮದುವೆ ಯಾವಾಗ ಆಗಬೇಕು ಎಂದು ನಿರ್ಧಾರ ಆಯಿತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ, ನನ್ನ ಯಜಮಾನರಿಗೆ ಗೊತ್ತು. ಮಡೇನಹಳ್ಳಿ ಮಲ್ಲಪ್ಪ ರವರು ಒಳ್ಳೇ ಸಂಬಂಧ ಮದುವರೆ ಮಾಡಿ ಎಂದು ಹೇಳಿದರು, ಆದರೆ ನನ್ನ ಮಗಳು ಒಪ್ಪಲಿಲ್ಲ. ಕೇವಲ ಎರಡೇ ದಿನ ಬಂದು ಹೋಗಿ ಮಾಡಿದ್ದರು. ನಿಶ್ಚಿತಾರ್ಥ ಪೂರ್ವದಲ್ಲಿ ಅವರ ಮನೆಗೆ ಹೋಗಿ ಅವರಿಗೆ ಎಷ್ಟು ಆಸ್ತಿ ಇದೆ ಎನ್ನುವ ಬಗ್ಗೆ ತಿಳಿದುಕೊಂಡರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಅವೆಲ್ಲಾ ನನಗೆ ಗೊತ್ತಿಲ್ಲ, ನನ್ನ ಯಜಮಾನರಿಗೆ ಗೊತ್ತು ಎಂದು ಹೇಳುತ್ತಾರೆ.

**7.** ನನಗೆ ಒಬ್ಬಳೇ ಮಗಳಾಗಿದ್ದರಿಂದ ಆಕೆಗೆ ಮದುವೆ ಮಾಡುವ ಮನೆ ಚೆನ್ನಾಗಿರಬೇಕು ಒಳ್ಳೇ ಮನೆತನ ಇರಬೇಕು ಎಂದು ತಿಳಿದುಕೊಳ್ಳುತ್ತೇವೆ, ಆದರೆ ನಾನು ತಿಳಿದುಕೊಂಡಿಲ್ಲ, ನನ್ನ ಯಜಮಾನರು ತಿಳಿದುಕೊಂಡಿದ್ದರು. ನನಗೆ ಮಾತನಾಡಲು ನನ್ನ ಯಾಜಮಾನರು ಬಿಡುತ್ತಿರಲಿಲ್ಲ, ತಾವೇ ತಿಳಿದುಕೊಳ್ಳುತ್ತಿದ್ದರು. ನನ್ನ ಮಗಳು ಶ್ರೀಕಂಠಸ್ವಾಮಿ ಕುಳ್ಳ ಎಂದು ಮದುವೆಗೆ ಒಪ್ಪಿಕೊಂಡಿರಲಿಲ್ಲ, ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ.

**8.** ನನ್ನ ಮಗಳು ಮದುವೆಯಾಗುವುದಿಲ್ಲ ವಿದ್ಯಾಭ್ಯಾಸ ಮುಂದುವರೆಸಬೇಕು ಎಂದು ಹೇಳುತ್ತಿದ್ದಳು. ನನ್ನ ಮಗಳು ಏನು ವಿದ್ಯಾಭ್ಯಾ ಮಾಡುತ್ತಿದ್ದಳು ಎಂದು ನನಗೆ ಗೊತ್ತಿಲ್ಲ. ಆಕೆ ಕೊಳ್ಳೇಗಾಲದಲ್ಲಿರುವ ಕಾಲೇಜಿಗೆ ವಿದ್ಯಾಭ್ಯಾಸಕ್ಕೆ ಹೋಗುತ್ತಿದ್ದಳು. ಆಕೆ ಏನು ಓದುತ್ತಿದ್ದಳು ಎಂದು ಹೇಳುತ್ತಿದ್ದಳು, ಆದರೆ ಈಗ ಮರೆತು ಹೋಗಿರುತ್ತದೆ.

**9. 1** ನೇ ಆರೋಪಿ ಜೊತೆ ನಿಶ್ಚಿತಾರ್ಥ ಆದಾಗಲೂ ಸಹ ನನ್ನ ಮಗಳು ವಿದ್ಯಾಭ್ಯಾಸ ಮಾಡುತ್ತಿದ್ದಳು. ಆ ಸಂದರ್ಭದಲ್ಲಿಯೂ ಸಹ ಆಕೆ ಮದುವೆಗೆ ಒಪ್ಪಿರಲಿಲ್ಲ. ಆದರೆ ಆರೋಪಿಯ ಚಿಕ್ಕಪ್ಪ ಹಿಂಸೆ ಮಾಡಿದ್ದರಿಂದ ನಮ್ಮ ಮಗಳ ಮದುವೆ ಮಾಡಿದೆವು. ನನ್ನ ಮಗಳಿಗೆ ಇಷ್ಟ ಇಲ್ಲದಿದ್ದರೂ ಸಹ ಆಕೆಯ ಇಷ್ಟಕ್ಕೆ ವಿರುದ್ದವಾಗಿ ಮದುವೆ ಮಾಡಿದೆವು ಎಂದರೆ ಸರಿ.

**10. 1** ನೇ ಆರೋಪಿಯ ಜೊತೆ ನನ್ನ ಮಗಳ ಮದುವೆ ಆದ ನಂತರ ಆಕೆ ಪರೀಕ್ಷೆ ಕಟ್ಟಿದ್ದಳು ಎಂದರೆ ಸರಿ. ಆರೋಪಿತರು ನನ್ನ ಮಗಳು ಓದಲಿ ನಮ್ಮದು ಏನು ಅಭ್ಯಂತರ ಇಲ್ಲ ಎಂದು ಒಪ್ಪಿಗೆ ನೀಡಿದ್ದರು ಎಂದರೆ ಸರಿ. ಮದುವೆ ಆದ ನಂತರವೂ ಸಹ ನನ್ನ ಮಗಳು ಕೊಳ್ಳೇಗಾಲಕ್ಕೆ ಹೋಗಿ ಬಂದು ಮಾಡುತ್ತಿದ್ದಳು ಎಂದರೆ ಸರಿ. ನನ್ನ ಮಗಳು ನಮ್ಮ ಮನೆಯಲ್ಲಿ ಇದ್ದು ವಿದ್ಯಾಭ್ಯಾಸ ಮಾಡುತ್ತೇನೆ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ಸಾಕ್ಷಿ ಪರೀಕ್ಷೆಯ ಸಂದರ್ಭದಲ್ಲಿ ಇದ್ದು ಪರೀಕ್ಷೆ ಬರೆದಿದ್ದಳು ಎಂದು ನುಡಿಯುತ್ತಾರೆ. ಮದುವೆಯಾದ **2** ತಿಂಗಳ ನಂತರ ಪರೀಕ್ಷೆ ಬರೆದು ಪಾಸ್ ಆಗಿದ್ದಳು. ನನ್ನ ಮಗಳ ವಿದ್ಯಾಭ್ಯಾಸಕ್ಕೆ ಆರೋಪಿತರು ಯಾವುದೇ ಅಡಚಣೆ ಮಾಡಿರುವುದಿಲ್ಲ ಎಂದರೆ ಸರಿ.

**11.** 1 ನೇ ಆರೋಪಿಗೆ ಮದುವೆ ಮಾಡುವ ಪೂರ್ವದಲ್ಲಿ ಆತನಿಗೆ ಸಂಬಂಧಪಟ್ಟ ಯಾವುದೇ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ಮನೆಯವರ ಬಳಿ ಹೇಳಿರಬಹುದು. ನನ್ನ ಮಗಳ ಮದುವೆಗೆ ಸಂಬಂಧಪಟ್ಟಂತೆ ಯಾವುದೇ ಮಾತುಕತೆ ನನ್ನ ಸಮಕ್ಷಮ ನಡೆದಿರುವುದಿಲ್ಲ. ನನ್ನ ಮನೆಯವರೇ ಮಾತುಕತೆ ಮಾಡಿರುತ್ತಾರೆ. ನಿಶ್ಚಿತಾರ್ಥದ ಬಗ್ಗೆಯೂ ಸಹ ನನ್ನ ಸಮಕ್ಷಮ ಯಾವುದೇ ಮಾತುಕತೆ ನಡೆದಿರುವುದಿಲ್ಲ. ಅದೇ ರೀತಿ ಮದುವೆಗೆ ಸಂಬಂಧಪಟ್ಟಂತೆ ಯಾವ ರೀತಿ ಮಾಡಬೇಕು, ಏನು ಮಾಡಬೇಕು ಎನ್ನುವ ಬಗ್ಗೆಯೂ ಸಹ ನನ್ನ ಸಮಕ್ಷಮ ಯಾವುದೇ ಮಾತುಕತೆ ಮಾಡಿರುವುದಿಲ್ಲ. ನಿಶ್ಚಿತಾರ್ಥ ಮತ್ತು ಮದುವೆ ಯಾವುದೇ ಅಡಚಣೆ ಇಲ್ಲದೆ ನಡೆಯಿತು.

**12.** ನನ್ನ ಮಗಳ ಮದುವೆ ಕರೋನಾ ಇದ್ದ ಸಂದರ್ಭದಲ್ಲಿ ಆಗಿರುತ್ತದೆ ಮತ್ತು ಆರೋಪಿಯ ಮನೆಯಲ್ಲೇ ನಡೆದಿರುತ್ತದೆ. ಮದುವೆ ಆರೋಪಿಯ ಮನೆಯಲ್ಲೇ ಒಪ್ಪಿ ನಡೆದಿತ್ತು. ಸದರಿ ಮದುವೆಯನ್ನು ಸಂಪ್ರದಾಯವಾಗಿ ಕೊಡುವುದು ತೆಗೆದುಕೊಳ್ಳುವುದನ್ನು ಮಾಡಿ ಮದುವೆ ಮಾಡಿದ್ದೆವು. ಮದುವೆ ಮಾಡುವ ಸಂದರ್ಭದಲ್ಲಿ 1 ನೇ ಆರೋಪಿ ಬೆಂಗಳೂರಿನಲ್ಲಿದ್ದಾನೆ, ವಿದ್ಯಾಭ್ಯಾಸ ಮಾಡಿದ್ದಾನೆ ಎಂದು ಗೊತ್ತಿತ್ತು. ಮದುವೆಯಾದ ನಂತರ ನಾವು ಖುದ್ದು 1 ನೇ ಆರೋಪಿಯೊಂದಿಗೆ ಕಷ್ಟ ಸುಖ ಕೇಳಿರುವುದಿಲ್ಲ. ನನ್ನ ಯಜಮಾನರ ಜೊತೆಯಾಗಲೀ ಅಥವಾ ನನ್ನ ಜೊತೆಯಾಗಲೀ 1 ನೇ ಆರೋಪಿ ಖುದ್ದಾಗಿ ಮಾತನಾಡಿರುವುದಿಲ್ಲ. ನಾನು ಒಂದು ಬಾರಿ 1 ನೇ ಆರೋಪಿ ಜೊತೆ ಮಾತನಾಡಿದ್ದೆ.

**13.** 2 ನೇ ಆರೋಪಿ ನನ್ನ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬರುತ್ತಿದ್ದರು. ನಾವು ನಮ್ಮ ಮಗಳನ್ನು ಅವರ ಮನೆಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದೆವು. ಮದುವೆಯಾದ ನಂತರ 1 ನೇ ಆರೋಪಿ ನಮ್ಮ ಮನೆಗೆ ಕೇವಲ ಎರಡು ಬಾರಿ ಬಂದಿರುತ್ತಾನೆ. ಆಗ ನಮ್ಮ ಮಗಳು ನಮ್ಮ ಮನೆಯಲ್ಲೇ ಇದ್ದಳು. ನನ್ನ ಸಮಕ್ಷಮ 1 ನೇ ಆರೋಪಿ ಹಾಗೂ ನನ್ನ ಮಗಳ ಮಧ್ಯೆ ಯಾವುದೇ ಮಾತುಕತೆ ಆಗಿರುವುದಿಲ್ಲ. ಆಗ ಅವರಿಬ್ಬರೂ ಅನ್ಯೋನ್ಯವಾಗಿದ್ದರು. ನನ್ನ ಮಗಳಿಗೆ ದೇವಸ್ಥಾನ ಪೂಜೆ, ದೇವರ ಮೇಲೆ ಭಕ್ತಿ ಜಾಸ್ತಿ ಎಂದರೆ ಸರಿ. ಆಕೆ ಒಬ್ಬಳೇ ದೇವಸ್ಥಾನಕ್ಕೆ ಹೋಗುತ್ತಿರಲಿಲ್ಲ, ನಮ್ಮ ಜೊತೆ ಬರುತ್ತಿದ್ದಳು.

**14.** ಕೆ.ಎಂ. ದೊಡ್ಡಿ ಕಂಪ್ಯೂಟರ್ ಕ್ಲಾಸಿಗೆ ನನ್ನ ಮಗಳು ಸೇರಿಕೊಂಡಿದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ಮದುವೆಯಾದ ಮೂರು ತಿಂಗಳ ನಂತರ

ಕಂಪ್ಯೂಟರ್ ಕ್ಲಾಸಿಗೆ ನನ್ನ ಮಗಳು ಸೇರಿಕೊಂಡಿದ್ದಳು. ಆಕೆ ಕಂಪ್ಯೂಟರ್ ಕ್ಲಾಸಿಗೆ ಸೇರಿದಾಗ ನಾವು ಆರೋಪಿ ಮನೆಗೆ ಹೋಗಿರುವುದಿಲ್ಲ. ನಾನು ಎಂದೂ ನನ್ನ ಮಗಳ ಜೊತೆ ಒಬ್ಬಳೇ ಆರೋಪಿಯ ಮನೆಗೆ ಭೇಟಿ ಮಾಡಿರುವುದಿಲ್ಲ. ನನ್ನ ಮಗಳು ಮದುವೆಯಾದ ನಂತರ ಒಂದು ವರ್ಷ ಕಾಲ ಆರೋಪಿಯ ಮನೆಯಲ್ಲಿದ್ದಳು. ನಾವು ಹೋಗಿ ಗಲಾಟೆ ಮಾಡಿ ಕರೆದುಕೊಂಡು ಬಂದರೂ ಸಹ ಒಂದು ದಿನ ಇರಲು ಬಿಡುತ್ತಿದ್ದರು.

**15.** ನನ್ನ ಮಗಳು ಮದುವೆಯಾದ ಒಂದು ವಾರಕ್ಕೆ ಆಷಾಢ ಇತ್ತು ಎಂದರೆ ಸರಿ. ಆಷಾಢ ಆದ ನಂತರ ಎರಡು ತಿಂಗಳಿಗೆ ಆಕೆಯ ಪರೀಕ್ಷೆ ಇತ್ತು ಎಂದರೆ ಸರಿ. ಪರೀಕ್ಷೆ ಸಂದರ್ಭದಲ್ಲಿ ಆಕೆ ನಮ್ಮ ಮನೆಯಲ್ಲೇ ಇದ್ದಳು ಎಂದರೆ ಸಾಕ್ಷಿ ಒಂದು ವಾರ ಇದ್ದಳು ಎಂದು ನುಡಿಯುತ್ತಾರೆ. ದೀಪಾವಳಿಗೆ ಒಂದು ವಾರ ನಮ್ಮ ಮನೆಯಲ್ಲಿದ್ದಳು ಎಂದರೆ ಸಾಕ್ಷಿ ನಾವೇ ಗಲಾಟೆ ಮಾಡಿ ಕರೆದುಕೊಂಡು ಬಂದೆವು ಎಂದು ಹೇಳುತ್ತಾರೆ. ದೀಪಾವಳಿಗೆ ಬಂದವಳು ಡಿಸೆಂಬರ್ ತನಕ ನಮ್ಮ ಮನೆಯಲ್ಲೇ ಇದ್ದಳು ಎಂದರೆ ಸರಿಯಲ್ಲ. ನಾವು ಪ್ರೀತಿಯಿಂದ ನಮ್ಮ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆವು ಎಂದರೆ ಸರಿ. ಸಂಕ್ರಾಂತಿ ಹಬ್ಬದಲ್ಲೂ ನಮ್ಮ ಮಗಳು ನಮ್ಮ ಮನೆಯಲ್ಲಿ ಇದ್ದಳು ಎಂದರೆ ಸರಿ. ಸಂಕ್ರಾಂತಿ ಆದ ನಂತರ ಶಿವರಾತ್ರಿ ತನಕ ನಮ್ಮ ಮನೆಯಲ್ಲಿದ್ದಳು ಎಂದರೆ ಸರಿಯಲ್ಲ. ನಮ್ಮ ಊರಿನ ಜಾತ್ರೆಗೂ ಸಹ ನಾವು ಕರೆದುಕೊಂಡು ಬಂದಿದ್ದೆವು ಎಂದರೆ ಸರಿಯಲ್ಲ.

**16.** ನನ್ನ ಮಗಳ ಮದುವೆಗೆ ಸಂಬಂಧಪಟ್ಟ ವ್ಯವಹಾರಗಳು ನನಗೆ ಖುದ್ದು ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ನನ್ನ ಯಜಮಾನರು ಹಣ ಕಾಸು ಆರೋಪಿತರಿಗೆ ನೀಡಿಲ್ಲ ಎಂದರೆ ಸರಿ. ನಮ್ಮ ಮಗಳಿಗೆ ಕೊಟ್ಟಂತಹ ಒಡವೆಗಳು ಪ್ರೀತಿಯಿಂದ ಸಂಪ್ರದಾಯದಂತೆ ಕೊಟ್ಟಿದ್ದೆವು ಎಂದರೆ ಸರಿ. ನನ್ನ ಯಜಮಾನರು ದೂರು ಕೊಟ್ಟ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ಆಸ್ಪತ್ರೆಯಲ್ಲಿ ಹೋಗಿ ನನ್ನ ಮಗಳ ಶವವನ್ನು ನೋಡಿರುವುದು ಬಿಟ್ಟರೆ ಉಳಿದಿರುವ ವಿಚಾರ ನನಗೆ ಖುದ್ದು ಗೊತ್ತಿರುವುದಿಲ್ಲ. ನನ್ನ ಮಗಳಿಗೆ ಇಷ್ಟವಿಲ್ಲದಿದ್ದರೂ ಸಹ ಬಲವಂತವಾಗಿ 1 ನೇ ಆರೋಪಿಯೊಂದಿಗೆ ಮದುವೆ ಮಾಡಿದೆವು ಎಂದರೆ ಸರಿ. ಆ ರೀತಿ ಇಷ್ಟವಿಲ್ಲದಿದ್ದರೂ ಸಹ ಮದುವೆ ಆಯಿತು ಎಂದು ನನ್ನ ಮಗಳು ಕೊರಗುತ್ತಿದ್ದಳು ಎಂದರೆ ಸರಿ. ಆ ರೀ ಇಷ್ಟ ಇಲ್ಲದಿದ್ದರೂ ಮದುವೆಯಾಗಿದ್ದ ಕಾರಣ ನನ್ನ ಮಗಳಿಗೆ 1 ನೇ ಆರೋಪಿಯನ್ನು ಕಂಡರೆ ಅಷ್ಟು ಇಷ್ಟ

ಇರಲಿಲ್ಲ ಎಂದರೆ ಆತನೂ ಸಹ ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿ ತೀರಿಕೊಂಡಿರುತ್ತಾಳೆ ಎಂರೆ ಸರಿಯಲ್ಲ. ಆರೋಪಿತರಿಗೂ ನನ್ನ ಮಗಳ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯದಲ್ಲಿ ಹೇಳಿದ ವಿಚಾರವನ್ನು ಎಂದೂ ನಾನು ಪೊಲೀಸರ ಮುಂದೆ ಹೇಳಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.